(6) ವಿಷಯ : ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಬಿ.ಬಿ.ಎಂ.ಪಿ. ಸರಹದ್ದಿನವರೆಗೆ ರಸ್ತೆ ಚೆನ್ನಾಗಿದ್ದು ನಂತರದ ರಸ್ತೆಯು ಚಿಕ್ಕದಾಗಿದ್ದು ಹಳ್ಳ ದಿಣ್ಣೆಗಳಿಂದ ಕೂಡಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ.

ಶ್ರೀ ಎಂ. ಕೃಷ್ಣಪ್ಪ (ವಿಜಯನಗರ) : ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಬಿ.ಬಿ.ಎಂ.ಪಿ. ಸರಹದ್ದಿನವರೆಗೆ ರಸ್ತೆ ಚೆನ್ನಾಗಿದ್ದು ನಂತರದ ರಸ್ತೆಯು ಚಿಕ್ಕದಾಗಿದ್ದು ಹಳ್ಳ ದಿಣ್ಣೆಗಳಿಂದ ಕೂಡಿದ್ದು ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ ಲೋಕೋಪಯೋಗಿ ಸಚಿವರ ಗಮನ ಸೆಳೆಯಬಯಸುತ್ತೇನೆ.

ಶ್ರೀ ಸಿ.ಎಂ. ಉದಾಸಿ(ಲೋಕೋಪಯೋಗಿ ಸಚಿವರು) : ಬಿ.ಬಿ.ಎಂ.ಪಿ. ಸರಹದ್ದಿನಿಂದ, ಬೆಂಗಳೂರು–ಬನ್ನೇರುಘಟ್ಟ –ಆನೇಕಲ್ ರಸ್ತೆಯ (ರಾಜ್ಯ ಹೆದ್ದಾರಿ – 87) ಸರಪಳಿ 16.80 ಕಿ.ಮೀ ರಿಂದ 20.20 ಕಿ.ಮೀ.ವರೆಗೆ ಅಂದರೆ 3.40 ಕಿ.ಮೀ. ಉದ್ದ ಹಾಗೂ ಕಗ್ಗಲೀಪುರ–ಬನ್ನೇರುಘಟ್ಟ ರಸ್ತೆಯಲ್ಲಿ (ಜಿಲ್ಲಾ ಮುಖ್ಯರಸ್ತೆ) ಸುಮಾರು 1.50 ಕಿ.ಮೀ. ಉದ್ದದ ರಸ್ತೆಯು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನವನ್ನು ಸಂಪರ್ಕಿಸುತ್ತದೆ. ಬೆಂಗಳೂರು–ಬನ್ನೇರುಘಟ್ಟ–ಆನೇಕಲ್ ರಸ್ತೆಯು ರಾಜ್ಯ ಹೆದ್ದಾರಿ–87 ಆಗಿದ್ದು, ಈ ರಸ್ತೆಯ ಸಂಚಾರ ಪಥವು 7.00 ಮೀ. ಅಗಲ ಇರುತ್ತದೆ. ಕಗ್ಗಲೀಪುರ–ಬನ್ನೇರುಘಟ್ಟ ರಸ್ತೆಯು ಜಿಲ್ಲಾ ಮುಖ್ಯ ರಸ್ತೆಯಾಗಿದ್ದು ಈ ರಸ್ತೆಯ ಸಂಚಾರ ಪಥವು 5.50 ಮೀಟರ್ ಅಗಲ ಇರುತ್ತದೆ. ಮೇಲ್ಕಂಡ ರಾಜ್ಯ ಹೆದ್ದಾರಿ ಮತ್ತು ಜಿಲ್ಲಾ ಮುಖ್ಯ ರಸ್ತೆಯ ಭಾಗಗಳಲ್ಲಿ ಉಂಟಾಗಿದ್ದ ಗುಂಡಿಗಳನ್ನು ಪ್ರಸ್ತುತ ಮುಂಗಾರು ನಂತರದ ಕಾಮಗಾರಿಗಳಲ್ಲಿ ಮುಚ್ಚಲಾಗಿದ್ದು, ಈ ಭಾಗದ ರಸ್ತೆಯ ಸಂಚಾರಕ್ಕೆ ಸುಮಗಮವಾಗಿರುತ್ತದೆ. 2010–11 ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ: 5054–ಸುವರ್ಣ ರಸ್ತೆ ಹಾಗೂ 5054–ಇತರೆ ರಸ್ತೆ ನಿರ್ಮಾಣ: ಯೋಜನೆಯ ಅಡಿಯಲ್ಲಿ 16.00 ಲಕ್ಷ ರೂಪಾಯಿಗಳಲ್ಲಿ ಒಂದು ಕಿ.ಮೀ. ರಸ್ತೆಯನ್ನು ದುರಸ್ತಿ ಮಾಡಲಾಗಿದೆ. ಆದರೆ ಉಳಿದ ರಸ್ತೆಯನ್ನು 3.40 ಕಿ.ಮೀ. ಉದ್ಧದ ಭಾಗದಲ್ಲಿ 1.00 ಕಿ.ಮೀ. ನಷ್ಟು ಉದ್ದದ ರಸ್ತೆಯನ್ನು ಅಭಿವೃದ್ಧಿಪಡಿಸಿದೆ. ಉಳಿದ ರಸ್ತೆಗಳನ್ನು ಅನುದಾನದ ಲಭ್ಯತೆಯ ಮೇರೆಗೆ ಆ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗುವುದು ಮತ್ತು ಸಧ್ಯ ಅದಕ್ಕೆ ಗುಂಡಿ

ಮುಚ್ಚುವಂಥ ಕೆಲಸವನ್ನು ಮಾಡಿ ರಸ್ತೆಯನ್ನು ವಾಹನ ಸಂಚಾರಕ್ಕೆ ಯೋಗ್ಯವಾಗಿರುವಂತೆ ಮಾಡುತ್ತೇವೆ. ಆದರೆ ಮಾನ್ಯ ಸದಸ್ಯರ ಒಂದು ಕೋರಿಕೆ ಏನಿದೆಯೆಂದರೆ ಇದೇ ರಸ್ತೆಯನ್ನು ಬಿ.ಬಿ.ಎಂ.ಪಿ.ಯವರು ತೆಗೆದುಕೊಳ್ಳುವುದಕ್ಕೆ ಕೋರಿಕೆಯನ್ನು ಸಲ್ಲಿಸಿದ್ದಾರೆ. ಅದರೆ ಬಿ.ಬಿ.ಎಂ.ಪಿ. ಯವರು ತೆಗೆದುಕೊಳ್ಳುವಂತೆ ಅವರನ್ನು ನಾವು ಮತ್ತೊಂದು ಬಾರಿ ಕೇಳುತ್ತೇವೆ. ಅವರು ತೆಗೆದುಕೊಳ್ಳುವುದಕ್ಕೆ ಒಪ್ಪಿದರೆ ಬಿ.ಬಿ.ಎಂ.ಪಿ.ಗೆ ಕೊಡಲಿಕ್ಕೆ ನಾವು ಅನುಮತಿ ನೀಡುತ್ತೇವೆ.

ಶ್ರೀ ಎಂ.ಕೃಷ್ಣಪ್ಪ : ಮಾನ್ಯ ಸಚಿವರಲ್ಲಿ ವಿನಂತಿ, ಈ Airport ಗೆ ಹೋಗುವ ದಾರಿಯಲ್ಲಿ ಎಲ್ಲಾ ರಸ್ತೆಗಳನ್ನು ಪಂಚಾಯತ್ ಲಿಮಿಟ್ ಇದ್ದರೂ ಕಾರ್ಪೊರೇಷನ್‌ನಿಂದ ಮಾಡಿದ್ದಾರೆ. ಆದರೆ ಇದು ರಾಷ್ಟ್ರೀಯ ಉದ್ಯಾನವನ ಆಗಿರುವುದರಿಂದ ಕಾರ್ಪೊರೇಷನ್‌ಗೆ, ಮಾನ್ಯ ಮಂತ್ರಿಗಳು ಮತ್ತು ಉಸ್ತುವಾರಿ ಸಚಿವರು ಇದಕ್ಕೆ ಗಮನ ಕೊಟ್ಟು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಆಯಿತು. ಈಗ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ ರವರು ಕೇಳಿ.

(7) ವಿಷಯ : ಗುಲಬರ್ಗಾ–ಚೌಡಾಪುರ ರಸ್ತೆ ಹಾಳಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗಿರುವ ಬಗ್ಗೆ.

ಶ್ರೀ ಮಾಲೀಕಯ್ಯ ವೆಂಕಯ್ಯ ಗುತ್ತೇದಾರ್ (ಅಫಜಲ್‌ಪುರ) : ಗುಲಬರ್ಗಾ–ಚೌಡಾಪುರ ರಸ್ತೆ ಹಾಳಾಗಿದ್ದು ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬವಾಗಿರುವ ಕುರಿತು ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ,

ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ – II (ಕೆಷಿಪ್–II) ರ ಅಡಿಯಲ್ಲಿ 3411 ಕಿ.ಮೀ. ಉದ್ದದ ರಾಜ್ಯ ಹೆದ್ದಾರಿಗಳ ಅಭಿವೃದ್ಧಿಯನ್ನು ಕೈಗೊಳ್ಳಲು ಯೋಜಿಸಲಾಗಿದೆ. ಗುಲ್ಬರ್ಗಾದಿಂದ ಚೌಡಾಪುರವರೆಗಿನ 30.00 ಕಿಮೀ. ಉದ್ದದ ರಸ್ತೆ ಅಭಿವೃದ್ಧಿಯನ್ನು 77.00 ಕೋಟಿ ರೂ.ಗಳ ಮೊತ್ತದಲ್ಲಿ ಯೋಜನೆಯ ಪ್ರಥಮ ಹಂತದಲ್ಲಿ ವಿಶ್ವಬ್ಯಾಂಕ್ ಆರ್ಥಿಕ